**<u>ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನಾ</u>**

**<u>ಯೋಜನೆ ವೈಶಿಷ್ಟ್ಯಗಳು</u>**

**I. <u>ಈ ಯೋಜನೆ ರಾಜ್ಯ ಸರ್ಕಾರಗಳು ಅಧಿಸೂಚಿಸಿರುವ ಬೆಳೆಗಳಿಗೆ ಎಲ್ಲ ರೈತರಿಗೆ ವಿಮಾ ಸುರಕ್ಷೆಯನ್ನು ಒದಗಿಸುತ್ತದೆ.</u>**

ಗೇಣಿದಾರರು ಮತ್ತು ಜಮೀನು ಭೋಗ್ಯಕ್ಕೆ ಪಡೆದು ಬೆಳೆ ಬೆಳೆಯುವ ರೈತರು ಸೇರಿದಂತೆ, ಅಧಿಸೂಚಿತ ಪ್ರದೇಶದಲ್ಲಿ ಅಧಿಸೂಚಿತ ಬೆಳೆಗಳನ್ನು ಬೆಳೆಯುವ ಎಲ್ಲ ರೈತರು ವಿಮಾ ಸುರಕ್ಷೆಗೆ ಅರ್ಹರಾಗಿರುತ್ತಾರೆ.

- ✓ ಅಧಿಸೂಚಿತ/ ವಿಮೆ ಮಾಡಿಸಿದ ಬೆಳೆಗಳಿಗೆ ರೈತರು ವಿಮೆಯ ಖಾತ್ರಿ ಹೊಂದಿರಬೇಕು.
- ✓ ಸಾಲಗಾರರಲ್ಲದ ರೈತರು ರಾಜ್ಯದಲ್ಲಿ ಇರುವ ಭೂ ದಾಖಲೆಗಳ ಅಗತ್ಯ ದಾಖಲೆ ಸಾಕ್ಷ್ಯಗಳನ್ನು (ಹಕ್ಕು ಪತ್ರ (ಆರ್‌ಒಆರ್), ಭೂಸ್ವಾಧೀನ ಪ್ರಮಾಣಪತ್ರ (ಎಲ್‌ಪಿಸಿ) ಇತ್ಯಾದಿ.) ಮತ್ತು/ಅಥವಾ ಅನ್ವಯವಾಗುವ ಗುತ್ತಿಗೆ/ಒಪ್ಪಂದ ವಿವರಗಳು/ ಸಂಬಂಧಪಟ್ಟ ರಾಜ್ಯ ಸರ್ಕಾರಗಳಿಂದ ಅನುಮತಿಸಲ್ಪಟ್ಟ/ ಅಧಿಸೂಚಿತ ಇತರ ದಾಖಲೆಗಳನ್ನು ಸಲ್ಲಿಸಬೇಕು (ಒಂದು ವೇಳೆ ಗೇಣಿದಾರರು/ ಜಮೀನು ಭೋಗ್ಯ ಪಡೆದ ರೈತರಾಗಿದ್ದಲ್ಲಿ).

*a.* ***ಕಡ್ಡಾಯ ಅಂಶ***

ಅಧಿಸೂಚಿತ ಬೆಳೆ(ಗಳಿ)ಗೆ ಆರ್ಥಿಕ ಸಂಸ್ಥೆಗಳಿಂದ (ಅಂದರೆ ಸಾಲಗಾರ ರೈತರು) ಋತುಮಾನದ ಕೃಷಿ ಕಾರ್ಯಾಚರಣೆಗಳ (ಎಸ್‌ಎಒ) ಸಾಲಗಳನ್ನು ಪಡೆಯುವ ಎಲ್ಲ ರೈತರಿಗೆ ಕಡ್ಡಾಯವಾಗಿ ವಿಮಾ ಸುರಕ್ಷೆ ಒದಗಿಸಲಾಗುತ್ತದೆ.
ಸಾಲ ಪಡೆದಿರುವ ಎಲ್ಲ ಬೇಸಾಯಗಾರರು ಯೋಜನೆಯ ನಿಯಮಗಳ ಅನುಸಾರ ವಿಮಾ ಸುರಕ್ಷೆಗೆ ಒತ್ತಾಯಿಸುವುದು ಕಡ್ಡಾಯವಾಗಿರುತ್ತದೆ.

- ✓ ಬೆಳೆ ಯೋಜನೆಯಲ್ಲಿ ಯಾವುದೇ ಬದಲಾವಣೆಯನ್ನು ಕಟ್-ಆಫ್ ದಿನಕ್ಕಿಂತ ಕನಿಷ್ಠ 30 ದಿನಗಳಿಗೆ ಮುಂಚೆ ಬ್ಯಾಂಕ್ ಗಮನಕ್ಕೆ ತರಬೇಕು.
- ✓ ಎಸ್‌ಎಲ್‌ಸಿಸಿಸಿ/ ರಾಜ್ಯ ಸರ್ಕಾರದ ಅಧಿಸೂಚನೆಯಲ್ಲಿ ಘೋಷಿಸಿರುವ ನಿರ್ದಿಷ್ಟ ಕಟ್-ಆಫ್ ದಿನಾಂಕದವರೆಗೆ ಮಾತ್ರ ವಿಮಾ ಪ್ರಸ್ತಾವನೆಗಳನ್ನು ಸ್ವೀಕರಿಸಲಾಗುತ್ತದೆ.

*b.* ***ಐಚ್ಛಿಕ ಅಂಶ***

ಸಾಲಗಾರರಲ್ಲದ ರೈತರಿಗೆ ಯೋಜನೆ ಐಚ್ಛಿಕವಾಗಿರುತ್ತದೆ ಮತ್ತು ಯಾವುದೇ ಅಧಿಸೂಚಿತ ವಿಮಾ ಘಟಕದಲ್ಲಿ ಯಾವುದೇ ಅಧಿಸೂಚಿತ ಬೆಳೆಗೆ ಪಿಎಂಎಫ್‌ಬಿವೈ ಅಡಿಯಲ್ಲಿ ವಿಮೆ ಪಡೆಯಲು ಬಯಸುವ ಬೇಸಾಯಗಾರರು ಕಟ್-ಆಫ್ ದಿನಾಂಕದ ಒಳಗೆ ಸಮೀಪದ ಬ್ಯಾಂಕ್ ಶಾಖೆ/ ಪಿಎಸಿಎಸ್/ ಅಧಿಕೃತ ಮಾಧ್ಯಮ ಸಹಭಾಗಿ/ ವಿಮಾ ಸಂಸ್ಥೆಯ ವಿಮಾ ಮಧ್ಯವರ್ತಿಯನ್ನು ಸಂಪರ್ಕಿಸಿ, ಸೂಚಿಸಿದ ಮಾದರಿಯಲ್ಲಿ ಪ್ರಸ್ತಾವನೆ ನಮೂನೆಯನ್ನು ಭರ್ತಿ ಮಾಡಿ, ವಿಮೆಗೆ ಪ್ರಸ್ತಾವಿಸಿರುವ ಕೃಷಿ ಭೂಮಿ/ ಬೆಳೆಗೆ ಸಂಬಂಧಿಸಿದ ವಿಮಾ ಖಾತ್ರಿಯ ಅಗತ್ಯ ದಾಖಲೆಗಳೊಂದಿಗೆ (ಉದಾಹರಣೆಗೆ ಮಾಲೀಕತ್ವ/ ಭೋಗ್ಯ/ ಬೇಸಾಯದ ಹಕ್ಕುಗಳು) ಬ್ಯಾಂಕ್ ಶಾಖೆ/ ವಿಮಾ ಮಧ್ಯವರ್ತಿ/ ಸಿಎಸ್‌ಸಿ ಕೇಂದ್ರಗಳಿಗೆ ನಮೂನೆ ಮತ್ತು ಪ್ರೀಮಿಯಂ ರೇವಣಿಯನ್ನು ಸಲ್ಲಿಸಬಹುದು.

- ✓ ವಿಮಾ ಸುರಕ್ಷೆ ಬಯಸುವ ರೈತರು ನಿಯೋಜಿತ ಬ್ಯಾಂಕ್‌ನ ಶಾಖೆಯಲ್ಲಿ ಒಂದು ಖಾತೆಯನ್ನು ತೆರೆಯಬೇಕು/ ವಹಿವಾಟು ನಡೆಸಬೇಕು, ಮತ್ತು ವಿವರಗಳನ್ನು ಪ್ರಸ್ತಾವನೆ ನಮೂನೆಯಲ್ಲಿ ಒದಗಿಸಬೇಕು.

- ✓ ರೈತರು ತಮ್ಮ ಭೂಮಿ ಗುರುತು ಸಂಖ್ಯೆಯನ್ನು ಪ್ರಸ್ತಾವನೆಯಲ್ಲಿ ನಮೂದಿಸಬೇಕು ಮತ್ತು ಬೇಸಾಯದ ಭೂಮಿಯ ಸ್ವಾಮ್ಯಕ್ಕೆ ಸಂಬಂಧಿಸಿ ದಾಖಲೆ ಸಾಕ್ಷ್ಯವನ್ನು ಕಡ್ಡಾಯವಾಗಿ ಒದಗಿಸಬೇಕು. ಬಿತ್ತನೆ ಮಾಡಿದ ಪ್ರದೇಶದ ದೃಢೀಕರಣ ಪ್ರಮಾಣಪತ್ರವನ್ನು ಬೇಸಾಯಗಾರರು ಕಡ್ಡಾಯವಾಗಿ ಒದಗಿಸಬೇಕು.

- ✓ ರೈತರು ಒಂದು ಹೊಲಕ್ಕೆ ಕೇವಲ ಒಂದು ಮೂಲದಿಂದ ಮಾತ್ರ, ಬೆಳೆದಿರುವ / ಬೆಳೆಯುವ ಪ್ರಸ್ತಾವನೆ ಮಾಡಿರುವ ಅಧಿಸೂಚಿತ ಬೆಳೆಗೆ ವಿಮಾ ಸುರಕ್ಷೆ ಪಡೆಯುವುನ್ನು ಖಾತ್ರಿಪಡಿಸಿಕೊಳ್ಳಬೇಕು. ಯಾವುದೇ ನಕಲು ಅಥವಾ ಎರಡು ವಿಮೆಗೆ ಅವಕಾಶ ಇರುವುದಿಲ್ಲ ಮತ್ತು ಅಂಥ ಪ್ರಕರಣಗಳಲ್ಲಿ ರೈತರು ವಿಮಾ ಸುರಕ್ಷೆಗೆ ಅರ್ಹರಿರುವುದಿಲ್ಲ. ಅಂಥ ಎಲ್ಲ ದಾವೆಗಳನ್ನು ತಿರಸ್ಕರಿಸುವ ಹಕ್ಕನ್ನು ವಿಮಾ ಸಂಸ್ಥೆ ಕಾಯ್ದಿರಿಸಿಕೊಂಡಿರುತ್ತದೆ ಮತ್ತು ಅಂಥ ಪ್ರಕರಣಗಳಲ್ಲಿ ಪ್ರೀಮಿಯಂ ಅನ್ನು ಕೂಡ ಮರುಪಾವತಿಸುವುದಿಲ್ಲ.
- ✓ ಅಂಥ ರೈತರ ವಿರುದ್ಧ ಸಂಸ್ಥೆ ಕಾನೂನು ಕ್ರಮವನ್ನು ಕೂಡ ಕೈಗೊಳ್ಳಬಹುದು.
- ✓ ಬೆಳೆ ಯೋಜನೆಯಲ್ಲಿ ಯಾವುದೇ ಬದಲಾವಣೆಯನ್ನು ಕಟ್-ಆಫ್ ದಿನಕ್ಕಿಂತ ಕನಿಷ್ಠ 30 ದಿನಗಳಿಗೆ ಮುಂಚೆ ಬ್ಯಾಂಕ್ ಗಮನಕ್ಕೆ ತರಬೇಕು.
- ✓ ಎಸ್‌ಎಲ್‌ಸಿಸಿಸಿ/ ರಾಜ್ಯ ಸರ್ಕಾರದ ಅಧಿಸೂಚನೆಯಲ್ಲಿ ಘೋಷಿಸಿರುವ ನಿರ್ದಿಷ್ಟ ಕಟ್-ಆಫ್ ದಿನಾಂಕದವರೆಗೆ ಮಾತ್ರ ವಿಮಾ ಪ್ರಸ್ತಾವನೆಗಳನ್ನು ಸ್ವೀಕರಿಸಲಾಗುತ್ತದೆ.

## II. ವಿಮಾ ಸುರಕ್ಷೆಗೆ ಒಳಪಡುವ ಬೆಳೆಗಳು

ಆಹಾರ ಮತ್ತು ಎಣ್ಣೆಬೀಜ ಬೆಳೆಗಳು ಮತ್ತು ಹಿಂದಿನ ವರ್ಷದ ಇಳವರಿ ಡೇಟಾ ಲಭ್ಯವಿರುವ ವಾರ್ಷಿಕ ವಾಣಿಜ್ಯ/ ತೋಟಗಾರಿಕಾ ಬೆಳೆಗಳಂಥ ಎಲ್ಲ ಬೆಳೆಗಳಿಗೆ ಈ ಯೋಜನೆಯಡಿ ವಿಮಾ ಸುರಕ್ಷೆ ನೀಡಲಾಗುತ್ತದೆ.
ಇದರ ಜೊತೆಗೆ ದೀರ್ಘಕಾಲಿಕ ಬೆಳೆಗಳಿಗೆ, ಇಳುವರಿ ಅಂದಾಜು ಮಾಡಲು ಪ್ರಮಾಣಿತ ವಿಧಾನ ಲಭ್ಯವಿರುವಂಥ ದೀರ್ಘಕಾಲಿಕ ತೋಟಗಾರಿಕಾ ಬೆಳೆಗಳಿಗೆ ಸುರಕ್ಷೆಗಾಗಿ ಪ್ರಾಯೋಗಿಕ ಮಾದರಿಯನ್ನು ತೆಗೆದುಕೊಳ್ಳಬಹುದು.

## III. ಯೋಜನೆಯಡಿ ಅಪಾಯಗಳಿಗೆ ಸುರಕ್ಷೆ ಮತ್ತು ನಿರಾಕರಣೆಗಳು

ವಿಮಾ ಘಟಕ(ಐಯು) ಎಂದು ಕರೆಯಲಾಗುವ ಆಯ್ದ ಪರಿಭಾಷಿತ ಪ್ರದೇಶಗಳಲ್ಲಿ "ಏರಿಯಾ ಅಪ್ರೋಚ್" ಸಿದ್ಧಾಂತದಲ್ಲಿ ಯೋಜನೆ ಕಾರ್ಯಾಚರಿಸುತ್ತದೆ, ಆಯಾ ರಾಜ್ಯ/ ಕೇಂದ್ರಾಡಳಿತ ಸರ್ಕಾರಗಳ ರಾಜ್ಯ ಮಟ್ಟದ ಸಮನ್ವಯ ಸಮಿತಿಗಳು ಬೆಳೆ ವಿಮೆಯ ಮೇಲೆ ತೆಗೆದುಕೊಳ್ಳುವ ನಿರ್ಧಾರಗಳಿಗೆ ಅನುಸಾರ ಮೂಲ ಬೆಳೆಗಳು ಮತ್ತು ಪರಿಭಾಷಿತ ಪ್ರದೇಶಗಳು ಇರುತ್ತವೆ. ಮುಖ್ಯ ಬೆಳೆಗಳಿಗೆ ಗ್ರಾಮ/ಗ್ರಾಮ ಪಂಚಾಯತ್ ಅಥವಾ ಇದಕ್ಕೆ ಸಮನಾದ ಇತರ ಯಾವುದೇ ಘಟಕಗಳಿಗೆ ಅನ್ವಯವಾಗುವ ವಿಮಾ ಘಟಕ ಎಂದು ಈ ಘಟಕಗಳನ್ನು ಅಧಿಸೂಚನೆ ಮಾಡಲಾಗುತ್ತದೆ. ಇತರ ಎಲ್ಲ ಬೆಳೆಗಳಿಗೆ ಇದು ಗ್ರಾಮ/ ಗ್ರಾಮ ಪಂಚಾಯತ್ ಮಟ್ಟಕ್ಕಿಂತ ದೊಡ್ಡ ಗಾತ್ರದ ಘಟಕವಾಗಿರಬಹುದು.

ಈ ಕೆಳಗಿನ ಬೆಳೆ ಹಂತಗಳು ಮತ್ತು ಬೆಳೆ ನಷ್ಟಕ್ಕೆ ಕಾರಣವಾಗುವ ಆಪತ್ತುಗಳಿಗೆ ಈ ಯೋಜನೆಯಡಿ ಸುರಕ್ಷೆ ನೀಡಲಾಗುತ್ತದೆ.

a. **ತಡೆಹಿಡಿಯಲ್ಪಟ್ಟ ಬಿತ್ತನೆ/ ನಾಟಿ ಆಪತ್ತು:** ಮಳೆ ಕೊರತೆ ಅಥವಾ ಪ್ರತಿಕೂಲ ಋತುಮಾನ ಪರಿಸ್ಥಿತಿಗಳಂಥ ಪ್ರತಿಕೂಲ ಹವಾಮಾನ ಪರಿಸ್ಥಿತಿಗಳ ಕಾರಣದಿಂದ ಅಧಿಸೂಚಿತ ಪ್ರದೇಶದ ವಿಮೆ ಮಾಡಿಸಿದ ಬಹುತೇಕ ಬೆಳೆಗಳ ಬಿತ್ತನೆ/ ನಾಟಿ ಮಾಡುವುದರಿಂದ ತಡೆಹಿಡಿಯಲ್ಪಟ್ಟರೆ, ವಿಮೆ ಮೊತ್ತದ ಗರಿಷ್ಠ 25% ನಷ್ಟ ಪರಿಹಾರ ದಾವೆಗಳಿಗೆ ವಿಮೆ ಮಾಡಿಸಿರುವ ಬೆಳೆ ಅರ್ಹವಾಗಿರುತ್ತದೆ.

b. **ಬೆಳೆಯುತ್ತಿರುವ ಬೆಳೆ (ಬಿತ್ತನೆಯಿಂದ ಕೊಯ್ಲಿನವರೆಗೆ):** ತಡೆಯಲು ಸಾಧ್ಯವಿಲ್ಲದ ಕಾರಣಗಳಿಂದ ಉಂಟಾಗುವ ಇಳುವರಿ ನಷ್ಟಗಳಿಗೆ ಸಮಗ್ರ ಆಪತ್ತು ವಿಮೆಯನ್ನು ನೀಡಲಾಗುತ್ತದೆ, ಉದಾಹರಣೆಗೆ, ಬರ, ಮಳೆ ಅಭಾವ, ಪ್ರವಾಹ, ಮುಳುಗಡೆ, ಕೀಟಗಳು ಮತ್ತು ರೋಗಗಳು, ಭೂಕುಸಿತಗಳು, ನೈಸರ್ಗಿಕ ಬೆಂಕಿ ಮತ್ತು ಸಿಡಿಲು, ಮುಸಲಧಾರೆ ಮಳೆ, ಆಲಿಕಲ್ಲು ಮಳೆ, ಚಂಡಮಾರುತ, ತೂಫಾನ್, ಬಿರುಗಾಳಿ, ಚಂಡಮಾರುತ ಮತ್ತು ಸುಂಟರಗಾಳಿ.

c. **ಕೊಯ್ಲು ನಂತರದ ನಷ್ಟಗಳು:** ಆಲಿಕಲ್ಲು ಮಳೆ, ಚಂಡಮಾರುತ ಮತ್ತು ಚಂಡಮಾರುತ ಮಳೆಗಳು ಮತ್ತು ಅಕಾಲಿಕ ಮಳೆಗಳ ನಿರ್ದಿಷ್ಟ ಅಪಾಯಗಳ ವಿರುದ್ಧ ಕೊಯ್ಲು ಮಾಡಿದ ಬಳಿಕ ಒಣಗಿಸಲು ಗದ್ದೆಯಲ್ಲಿ ಕತ್ತರಿಸಿ ಹರಡಿರುವ ಬೆಳೆಗಳಿಗೆ ಕೊಯ್ಲಿನ ನಂತರ ಗರಿಷ್ಠ ಎರಡು ವಾರಗಳಿಗೆ ಮಾತ್ರ ವಿಮಾ ಸುರಕ್ಷೆ ಲಭ್ಯವಿರುತ್ತದೆ.

ದೇಶಾದ್ಯಂತ ಚಂಡಮಾರುತ ಅಥವಾ ಚಂಡಮಾರುತ ಮಳೆಗಳು/ ಅಕಾಲಿಕ ಮಳೆಗಳಿಂದ ಉಂಟಾಗುವ ಕೊಯ್ಲು ನಂತರದ ನಷ್ಟಗಳು ಮತ್ತು ಸ್ಥಳೀಯ ಆಪತ್ತುಗಳ ಕಾರಣದಿಂದ ಉಂಟಾದ ಬೆಳೆ ನಷ್ಟದ ದಾವೆಗಳಿಗೆ, ಕೇವಲ ಒಣಗಿಸುವ ಉದ್ದೇಶಕ್ಕಾಗಿ ಮಾತ್ರ ಗದ್ದೆಯಲ್ಲಿ 'ಕತ್ತರಿಸಿ ಹರಡಿರುವ' ಸ್ಥಿತಿಯಲ್ಲಿ ಇರುವ ಕೊಯ್ಲು ಮಾಡಿದ ಬೆಳೆಗೆ ಆದ ಹಾನಿಗೆ, ಕೊಯ್ಲಿನ ನಂತರ ಗರಿಷ್ಠ ಎರಡು ವಾರಗಳ ಕಾಲ(14 ದಿನಗಳು) ಸಹ ವಿಮಾ ಸುರಕ್ಷೆ ನೀಡಲಾಗುತ್ತದೆ ಮತ್ತು ನಷ್ಟದ ಮೌಲ್ಯಮಾಪನವನ್ನು ವೈಯಕ್ತಿಕ ಹೊಲದ ಆಧಾರದಲ್ಲಿ ಮಾಡಲಾಗುತ್ತದೆ.

d. **ಸ್ಥಳೀಯ ವಿಪತ್ತುಗಳು:** ಅಧಿಸೂಚಿತ ಪ್ರದೇಶದ ಪ್ರತ್ಯೇಕ ಹೊಲದಲ್ಲಿ ಬಾಧೆಯುಂಟುಮಾಡುವ ಆಲಿಕಲ್ಲು ಮಳೆ, ಭೂಕುಸಿತ, ಮುಳುಗಡೆ, ಮೇಘ ಸ್ಫೋಟ ಮತ್ತು ಸಿಡಿಲಿನಿಂದ ಉಂಟಾಗುವ ನೈಸರ್ಗಿಕ ಬೆಂಕಿಯ ಗುರುತಿಸಲ್ಪಟ್ಟ ಸ್ಥಳೀಯ ಆಪತ್ತುಗಳ ಸಂಭವಿಸುವಿಕೆಯಿಂದ ಉಂಟಾಗುವ ನಷ್ಟ/ ಹಾನಿ.

**ಗಮನಿಸಿ: ಯುದ್ಧ ಮತ್ತು ಅಣು ಆಪತ್ತುಗಳು, ದುರುದ್ದೇಶಪೂರಿತ ಹಾನಿ ಮತ್ತು ಇತರ ತಡೆಯಬಹುದಾದ ಅಪಾಯಗಳಿಂದ ಉಂಟಾಗುವ ನಷ್ಟಗಳನ್ನು ಹೊರತುಪಡಿಸಲಾಗುತ್ತದೆ.**

## IV. ವಿವಿಧ ಬೆಳೆಗಳಿಗೆ ಅನ್ವಯವಾಗುವ ನಷ್ಟಪರಿಹಾರ ಮಟ್ಟಗಳು

ಬೆಳೆಯ ವಿಧಗಳ ಆಧಾರದ ಪ್ರದೇಶಗಳಿಗೆ, ಅಧಿಕ, ಮಧ್ಯಮ ಮತ್ತು ಕಡಿಮೆ ಅಪಾಯಗಳಿಗೆ ಅನುಕ್ರಮವಾಗಿ, 70%, 80% ಮತ್ತು 90% ವರೆಗೆ **ಭಿನ್ನ ನಷ್ಟಪರಿಹಾರಗಳನ್ನು ಒದಗಿಸಲಾಗುತ್ತದೆ**
ಮತ್ತು ಅನ್ವಯವಾಗುವ ಅಧಿಸೂಚಿತ ಘಟಕದ ಅನುಸಾರ ಬೆಳೆಗಳು ಮತ್ತು ಪ್ರದೇಶಗಳಿಗೆ ಅಧಿಸೂಚನೆ ಮಾಡಲಾಗುತ್ತದೆ.

## V. ಪ್ರೀಮಿಯಂ

ಎಲ್ಲ ಮುಂಗಾರಿನ ಆಹಾರ ಮತ್ತು ಎಣ್ಣೆಬೀಜ ಬೆಳೆಗಳಿಗೆ ರೈತರು ಪಾವತಿಸಬೇಕಾಗುವ ಗರಿಷ್ಠ ಪ್ರೀಮಿಯಂ 2%, ಹಿಂಗಾರಿನ ಆಹಾರ ಮತ್ತು ಎಣ್ಣೆಬೀಜ ಬೆಳೆಗಳಿಗೆ 1.5% ಮತ್ತು ವಾರ್ಷಿಕ ವಾಣಿಜ್ಯ /ತೋಟಗಾರಿಕಾ ಬೆಳೆಗಳಿಗೆ 5% ಅಥವಾ ವಾಸ್ತವಿಕ ಪ್ರೀಮಿಯಂ ದರ, ಇವುಗಳಲ್ಲಿ ಯಾವುದು ಕಡಿಮೆಯಾಗಿರುತ್ತದೋ ಅದು. ರೈತರು ಪಾಪತಿಸಬೇಕಾಗುವ ಪ್ರೀಮಿಯಂ ಮತ್ತು ವಿಮಾ ದರಗಳ ನಡುವಿನ ವ್ಯತ್ಯಾಸವನ್ನು ಕೇಂದ್ರ ಮತ್ತು ರಾಜ್ಯಗಳು ಸಮನಾಗಿ ಹಂಚಿಕೊಳ್ಳುತ್ತವೆ.

- ಗಮನಿಸಿ: ರಾಜ್ಯ ಸರ್ಕಾರದ ಅಧಿಸೂಚನೆಯಲ್ಲಿ ವ್ಯಾಖ್ಯಾನಿಸಲಾಗಿರುವಂತೆ ಸಾಲಗಾರ ಮತ್ತು ಸಾಲಗಾರರಲ್ಲದ ರೈತರಿಗೆ ಕಾಲಮಾನದ ಬದ್ಧತೆ ಅನ್ವಯವಾಗುತ್ತದೆ ಮತ್ತು ಋತುಮಾನದಲ್ಲಿ ಸಂಬಂಧಿತ ಬೆಳೆಗಳಿಗೆ ಅನ್ವಯವಾಗುವ ನಿರ್ದಿಷ್ಟ ಕಟ್ ಆಫ್ ದಿನಾಂಕಗಳಿಗಿಂತ ಮೊದಲು ರೈತರು ನೋಂದಣಿ ಮಾಡಿಕೊಳ್ಳುವುದು ಅಗತ್ಯವಾಗಿರುತ್ತದೆ.
- ಒಂದು ವಿಮಾ ಘಟಕದಲ್ಲಿ ವಿಮೆ ಮಾಡಿಸಿಕೊಂಡಿರುವ ಎಲ್ಲ ರೈತರಿಗೆ ನೀಡಲಾಗುವ ವಿಮಾ ಸುರಕ್ಷಗೆ ಇಳುವರಿ ಮಿತಿ (ಟಿವೈ) ಮಾನದಂಡ ಇಳುವರಿ ಪ್ರಮಾಣವಾಗಿರುತ್ತದೆ.
- ಒಂದು ವಿಮಾ ಘಟಕದಲ್ಲಿ (ಐಯು) ಅಧಿಸೂಚಿತ ಬೆಳೆಯ ಸರಾಸರಿ ಇಳುವರಿ, ಕಳೆದ ಏಳು ವರ್ಷಗಳಲ್ಲಿ ಅತ್ಯುತ್ತಮ ಐದು ವರ್ಷಗಳ ಸರಾಸರಿ ಇಳುವರಿಯಾಗಿರುತ್ತದೆ. ಅಧಿಸೂಚಿತ ಬೆಳೆಯ ಇಳುವರಿ ಮಿತಿ ನಷ್ಟಪರಿಹಾರ ಮಟ್ಟದಿಂದ ಗುಣಿಸಲ್ಪಟ್ಟ ಸರಾಸರಿ ಇಳುವರಿಗೆ ಸಮನಾಗಿರುತ್ತದೆ.

**VI. <u>ದಾವೆ ಇತ್ಯರ್ಥದ ಆಧಾರಗಳು</u>**

**ಈ ಕೆಳಗಿನವುಗಳಿಗೆ ಒಳಪಟ್ಟು, ಏರಿಯಾ ಅಪ್ರೋಚ್ ಆಧಾರದಲ್ಲಿ, ದಾವೆಗಳ ಪರಿಹಾರವನ್ನು ನೀಡಲಾಗುತ್ತದೆ:**

a. ಅಧಿಸೂಚಿತ ವಿಮಾ ಘಟಕ ಪ್ರದೇಶದ ಮಟ್ಟದಲ್ಲಿ ಅಗತ್ಯ ಸಂಖ್ಯೆಯ ಬೆಳೆ ಕಟಾವು ಪ್ರಯೋಗಗಳನ್ನು (ಸಿಸಿಇಗಳು) ರಾಜ್ಯ ನಡೆಸಬೇಕು ಮತ್ತು ಸಂಬಂಧಿಸಿದ ಅಧಿಸೂಚಿತ ವಿಮಾ ಘಟಕ ಪ್ರದೇಶದ ಆಧಾರದಲ್ಲಿ ಪಾವತಿಸಬೇಕಾದ ದಾವೆಗಳನ್ನು ಲೆಕ್ಕಾಚಾರ ಮಾಡಲು ಸೂಚಿತ ಕಾಲಮಿತಿಯ ಒಳಗೆ ಸಿಸಿಇ ಆಧರಿತ ಇಳುವರಿ ಡೇಟಾವನ್ನು ಇನ್ಶೂರೆನ್ಸ್ ಸಂಸ್ಥೆಗಳಿಗೆ ಒದಗಿಸಬೇಕು.

b. ಯೋಜನೆಯ ಸ್ಥೂಲನೋಟ ಮತ್ತು ಕಾರ್ಯಾಚರಣೆ ಮಾರ್ಗಸೂತ್ರಗಳಡಿ ವಿವರಿಸಲಾಗಿರುವಂತೆ, ಇಳಿಕೆಯ ಕ್ರಮದಲ್ಲಿ, ಪ್ರತಿ ಘಟಕ ಪ್ರದೇಶ/ ಪ್ರತಿ ಬೆಳೆಗೆ ಬೆಳೆ ಕಟಾವು ಪ್ರಯೋಗ (ಸಿಸಿಇ) ಕೈಗೊಳ್ಳಬೇಕು.

c. ಒಂದು ವಿಮಾ ಘಟಕದಲ್ಲಿ ವಿಮೆ ಮಾಡಿಸಿಕೊಂಡಿರುವ ಎಲ್ಲ ರೈತರಿಗೆ ನೀಡಲಾಗುವ ವಿಮಾ ಸುರಕ್ಷಗೆ ಇಳುವರಿ ಮಿತಿ (ಟಿವೈ) ಮಾನದಂಡ ಇಳುವರಿ ಪ್ರಮಾಣವಾಗಿರುತ್ತದೆ. ಒಂದು ವಿಮಾ ಘಟಕದಲ್ಲಿ (ಐಯು) ಅಧಿಸೂಚಿತ ಬೆಳೆಯ ಸರಾಸರಿ ಇಳುವರಿ, ಕಳೆದ ಏಳು ವರ್ಷಗಳಲ್ಲಿ ಅತ್ಯುತ್ತಮ ಐದು ವರ್ಷಗಳ ಸರಾಸರಿ ಇಳುವರಿಯಾಗಿರುತ್ತದೆ. ಅಧಿಸೂಚಿತ ಬೆಳೆಯ ಇಳುವರಿ ಮಿತಿ ನಷ್ಟಪರಿಹಾರ ಮಟ್ಟದಿಂದ ಗುಣಿಸಲ್ಪಟ್ಟ ಸರಾಸರಿ ಇಳುವರಿಗೆ ಸಮನಾಗಿರುತ್ತದೆ.

**ಪ್ರಮುಖ ಸೂಚನೆ:**

1. ರೈತರು ತಮ್ಮ ಬ್ಯಾಂಕ್ ಶಾಖೆಗಳು, ಸಮೀಪದ ಸಿಎಸ್‌ಸಿ ಅಥವಾ ಐಆರ್‌ಡಿಎ ದೃಢೀಕರಣ ಹೊಂದಿರುವ ವಿಮಾ ಮಧ್ಯವರ್ತಿಗಳ ಮೂಲಕ ಯೋಜನೆಯಲ್ಲಿ ನೋಂದಾಯಿಸಿಕೊಳ್ಳಬಹುದು.

2. ಸಂಬಂಧಿತ ರಾಜ್ಯ ಸರ್ಕಾರದ ಅಧಿಸೂಚನೆಯಲ್ಲಿ ವಿವರಿಸಿರುವ ಕಟ್‌ಆಫ್ ದಿನಾಂಕದ ಒಳಗೆ ಎಲ್ಲ ನೋಂದಣಿಗಳನ್ನು ಪೂರ್ಣಗೊಳಿಸುವ ಅಗತ್ಯವಿರುತ್ತದೆ ಮತ್ತು ವಿಮಾ ಸಂಸ್ಥೆಯ ಕಟ್ ಆಫ್ ದಿನಾಂಕದ ಒಳಗೆ ರೈತರು ಪಾವತಿಸಬೇಕಿರುವ ಪ್ರೀಮಿಯಂ ಭಾಗವನ್ನು ಬ್ಯಾಂಕ್ ಅಥವಾ ಮಧ್ಯವರ್ತಿಯಿಂದ ಪಾವತಿಸಬೇಕು.

3. ಒಂದು ವೇಳೆ ರೈತ ಬೆಳೆಯುವ ಬೆಳೆಯನ್ನು ಬದಲಿಸಿದಲ್ಲಿ, ವಿಮೆ ಖರೀದಿಗೆ ಅಥವಾ ಬಿತ್ತನೆಗೆ ಇರುವ ಕಟ್-ಆಫ್ ದಿನಾಂಕಕ್ಕೆ ಕನಿಷ್ಠ 2 ವ್ಯವಹಾರದ ದಿನಗಳಿಗೆ ಮುಂಚೆ, ಆರ್ಥಿಕ ಸಂಸ್ಥೆ/ ಮಾಧ್ಯಮ ಸಹಭಾಗಿಗಳ ಮೂಲಕ/ ನೇರವಾಗಿ; ಪ್ರಕರಣಕ್ಕೆ ಅನುಸಾರ, ಯಾವುದಾದರೂ ಇದ್ದಲ್ಲಿ ಪಾವತಿಸಬೇಕಿರುವ ಹೆಚ್ಚುವರಿ ಪ್ರೀಮಿಯಂನೊಂದಿಗೆ, ರಾಜ್ಯದ ಸಂಬಂಧಿತ ಗ್ರಾಮ/ ಉಪ ಜಿಲ್ಲಾ ಮಟ್ಟದ ಅಧಿಕಾರಿ ಜಾರಿ ಮಾಡಿದ

ಬಿತ್ತನೆ ಪ್ರಮಾಣಪತ್ರದ ಜೊತೆ ಬದಲಾವಣೆಯನ್ನು ವಿಮಾ ಸಂಸ್ಥೆ ಗಮನಕ್ಕೆ ತರಬೇಕು. ಒಂದು ವೇಳೆ ಪಾವತಿಸಿದ ಪ್ರೀಮಿಯಂ ಮೊತ್ತ ಹೆಚ್ಚಿದ್ದಲ್ಲಿ, ವಿಮಾ ಸಂಸ್ಥೆ ಹೆಚ್ಚುವರಿ ಮೊತ್ತವನ್ನು ಮರುಪಾವತಿಸುತ್ತದೆ.

4. ಒಂದು ವೇಳೆ ಗೇಣಿದಾರರು/ ಜಮೀನು ಭೋಗ್ಯ ಪಡೆದ ರೈತರು ವಿಮಾ ಸುರಕ್ಷೆ ಪಡೆದುಕೊಳ್ಳುತ್ತಿದ್ದಲ್ಲಿ, ರಾಜ್ಯದಲ್ಲಿ ಇರುವ ಭೂ ದಾಖಲೆಗಳ ಅಗತ್ಯ ದಾಖಲೆ ಸಾಕ್ಷ್ಯಗಳನ್ನು (ಹಕ್ಕು ಪತ್ರ (ಆರ್‌ಒಆರ್), ಭೂಸ್ವಾಧೀನ ಪ್ರಮಾಣಪತ್ರ (ಎಲ್‌ಪಿಸಿ) ಇತ್ಯಾದಿ.) ಮತ್ತು/ ಅಥವಾ ಅನ್ವಯವಾಗುವ ಗುತ್ತಿಗೆ/ ಒಪ್ಪಂದ ವಿವರಗಳು/ ಸಂಬಂಧಪಟ್ಟ ರಾಜ್ಯ ಸರ್ಕಾರಗಳಿಂದ ಅನುಮತಿಸಲ್ಪಟ್ಟ/ ಅಧಿಸೂಚಿತ ಇತರ ದಾಖಲೆಗಳನ್ನು ನೋಂದಣಿ ಸಮಯದಲ್ಲಿ ಸಲ್ಲಿಸಬೇಕು.

5. ಈ ಯೋಜನೆಗೆ ಸೇವಾ ತೆರಿಗೆ ವಿನಾಯಿತಿ ಇರುತ್ತದೆ.